ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

<u>ಸಿ.ಸಿ. 17/2023</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಇಮ್ರಾನ್ | ಪ್ರಾ.ಸಾ.1 |
| ತಂದೆಯ/ಗಂಡನ ಹೆಸರು | : | ಅಬ್ದುಲ್ ಸಲಾಂ | ಚಾ.ಸಾ.1 |
| ವಯಸ್ಸು | : | 42 ವರ್ಷ | |
| ಕೆಲಸ | : | ಪಿ.ಎಸ್.ಐ. ರಾಜ್ಯ ಗುಪ್ತ ವಾರ್ತೆ , ಚಿತ್ರದುರ್ಗ | ಸಾ ಪ್ರ ಬೋ |
| ವಾಸ | : | ಚಿತ್ರದುರ್ಗ | ದಿಃ07.02.2025 |

**<u>ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ</u>**

ನಾನು ಏಪ್ರಿಲ್ 2022 ರಿಂದ ಜೂನ್ 2023 ರವರೆಗೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 23.06.2022 ರಂದು ರಾತ್ರಿ 7 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದಾಗ ಚಾಸಾ.4 ರವರು ಮಲ್ಲಾಡಿಹಳ್ಳಿ ಗ್ರಾಮದ ಕಡ್ಲೆಹಟ್ಟಿ ಬಡಾವಣೆಯಲ್ಲಿ ಆರೋಪಿತನು ಮನೆಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿದಾರರು ಮಾಹಿತಿ ನೀಡಿರುತ್ತಾರೆ ಎಂದು ತಿಳಿಸಿದರು. ನಂತರ ಸದರಿ ಮಾಹಿತಿಯ ಮೇರೆಗೆ ವರದಿಯನ್ನು ತಯಾರಿಸಿ ಸದರಿ ವರದಿಯನ್ನು ಚಾಸಾ.8 ರವರಿಗೆ ಸಲ್ಲಿಸಿರುತ್ತೇನೆ. ನಂತರ ಸಿಬ್ಬಂಧಿಗಳಾದ ಚಾಸಾ.4 ಹಾಗೂ ಠಾಣಾ ಜೀಪಿನ ಚಾಲಕನಾದ ಪ್ರದೀಪ್ ರವರನ್ನು ಕರೆಸಿಕೊಂಡು ಆ ಬಗ್ಗೆ ಮಾಹಿತಿ ನೀಡಿ ಸ್ಥಳಕ್ಕೆ ಹೋಗಿರುತ್ತೇವೆ. ಪಂಚಾರಾದ ಚಾಸಾ.2 ಮತ್ತು 3 ರವರನ್ನು ಚಾಸಾ.4 ರವರು ಮಲ್ಲಾಡಿಹಳ್ಳೀ ಗ್ರಾಮದ ಮುಖ್ಯ ದ್ವಾರದ ಬಳಿ ಕರೆದುಕೊಂಡು ಬಂದಿದ್ದು, ಅವರಿಗೂ ಸಹ ಮಾಹಿತಿ ನೀಡಿ ಅವರನ್ನು ನಮ್ಮೊಂದಿಗೆ ಠಾಣಾ ಜೀಪಿನಲ್ಲಿ ಕರೆದುಕೊಂಡು ರಾತ್ರಿ 7.25 ಕ್ಕೆ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಆರೋಪಿತನು ನಮ್ಮನ್ನು ನೋಡಿ ಕೈಯಲ್ಲಿದ್ದ ರಟ್ಟಿನ ಬಾಕ್ಸ್‌ನ್ನು ಎಸೆದು ಓಡಿ ಹೋಗಿರುತ್ತಾನೆ. ನಂತರ ಚಾಸಾ. 2 ಮತ್ತು 3 ರವರ ಬಳಿ ಹೆಸರು ಮತ್ತು ವಿಳಾಸದ ಬಗ್ಗೆ ಕೇಳಲಾಗಿ ಆತನ ಹೆಸರು ವಿಜಯ ಕುಮಾರ್ ತಂದೆ ಗುಡದಪ್ಪ, ಮಲ್ಲಾಡಿಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾರೆ. ಆರೋಪಿತನು ಎಸೆದು ಹೋದ ರಟ್ಟಿನ ಬಾಕ್ಸ್‌ನ್ನು ಪರಿಶೀಲಿಸಲಾಗಿ 90 ಎಂ.ಎಲ್.ನ 28 ರಾಜಾ ವಿಸ್ಕಿ ಪೌಚುಗಳು ಮತ್ತು 90 ಎಂ.ಎಲ್.ನ 35 ಹೈವರ್ಡ್ಸ್ ವಿಸ್ಕಿ ಪೌಚುಗಳು ಇದ್ದವು, ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ, ಆರೋಪಿತನು

ಬಿಟ್ಟುಹೋದ ರೂ.140/- ನಗದು ಹಣ ಇತ್ತು. ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಮಹಜರನ್ನು ವಿದ್ಯುತ್ ದೀಪದ ಬೆಳಕಿನಿಂದ ರಾತ್ರಿ 7.40 ರಿಂದ 8.40 ಗಂಟೆಯ ವರೆಗೆ ಜರುಗಿಸಿರುತ್ತೇನೆ. ಅಮಾನತ್ತುಪಡಿಸಕೊಂಡ ಮಧ್ಯದ ಪೌಚು ಮತ್ತು ಹಣವನ್ನು ಠಾಣೆಗೆ ತಂದು ಚಾಸಾ.8 ರವರಿಗೆ ವಹಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಮತ್ತು ಮಧ್ಯದ ಪೌಚುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಹಿತು. ಸಅಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

**ಮುದ್ದೆಮಾಲನ್ನು ಗುರುತಿಸುವ ಸಲುವಾಗಿ ವಿಚಾರಣೆಯನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ